# ರೈತನ ಉಪಾಯ



ಮಹಾರಾಜನೊಬ್ಬನಿಗೆ ಒಬ್ಬ ವಿದೇಶೀ ವ್ಯಾಪಾರಿ ಎರಡು ಪಂಚವರ್ಣ ಗಿಳಿಗಳನ್ನು ಉಡುಗೊರೆಯಾಗಿ ಕೊಟ್ಟಿದ್ದ. ರಾಜ ಆ ಪಕ್ಷಿಗಳನ್ನು ಚೆನ್ನಾಗಿ ಪಳಗಿಸುವಂತೆ ಹೇಳಿ ಒಬ್ಬನ ಬಳಿ ಸಾಕಲು ಬಿಟ್ಟ. ಕೆಲವು ತಿಂಗಳು ಕಳೆದವು. ರಾಜ ತನ್ನ ನೆಚ್ಚಿನ ಹಕ್ಕಿಗಳ ಬೆಳವಣಿಗೆಯನ್ನು ನೋಡಲು ಬಂದ. ಒಂದು ಗಿಳಿ ಚೆನ್ನಾಗಿ ಹಾರುತ್ತಿದ್ದರೆ, ಇನ್ನೊಂದು ಗಿಳಿ ಕುಳಿತಿದ್ದ ಜಾಗವನ್ನು ಬಿಟ್ಟು ಕದಲುತ್ತಲೇ ಇರಲಿಲ್ಲ. ರಾಜ ಅದರ ರೆಕ್ಕೆಯಲ್ಲಿ ಏನಾದರೂ ದೋಷವಿರಬಹುದೆಂದು ಪ್ರಾಣಿ ವೈದ್ಯರನ್ನು ಕರೆಸಿ ಪರೀಕ್ಷಿಸಿದ.

ವೈದ್ಯರು ಗಿಳಿಯನ್ನು ಚೆನ್ನಾಗಿ ಪರೀಕ್ಷಿಸಿ, ಅದರ ದೇಹದಲ್ಲಿ ಯಾವುದೇ ದೋಷವಿಲ್ಲ ಎಂದರು. ಯಾರು, ಎಷ್ಟೇ ಪ್ರಯತ್ನ ಮಾಡಿ ನೋಡಿದರೂ ಗಿಳಿ ಹಾರಲಿಲ್ಲ! ರಾಜನಿಗೆ ಚಿಂತೆಯಾಯಿತು. ಗಿಳಿಯ ಕುರಿತ ವಿವರಗಳನ್ನು ಹೇಳಿ, ಅದನ್ನು ಹಾರುವಂತೆ ಮಾಡುವವರು ಇದ್ದರೆ ಅರಮನೆಗೆ ಬರುವಂತೆ ಡಂಗುರ ಹೊಡಿಸಿದ.

ಈ ಸಂಗತಿಯನ್ನು ಕೇಳಿ ಗ್ರಾಮದ ಓರ್ವ ವೃದ್ಧ ರೈತ ಬಂದ. ಅವನು ಗಿಳಿಯ ಬಳಿ ಹೋದ. ಮುಂದೆ ಏನು ಮಾಡಲಿದ್ದಾನೆಂದು ನೋಡುವ ಕುತೂಹಲ ಜನರಲ್ಲಿ! ಕಣ್ಣು ಮುಚ್ಚಿ ತೆರೆಯುವುದರೊಳಗೆ ಗಿಳಿ ಮರದ ಸುತ್ತ ಹಾರುತ್ತಿತ್ತು! ರಾಜನಿಗೆ ಪರಮಾಶ್ಚರ್ಯ. ‘ಇದು ಹೇಗೆ ಸಾಧ್ಯವಾಯಿತು?’ ಎಂದು ಕೇಳಿದ.

‘ಸ್ವಾಮಿ, ನಾನು ಅಂಥದ್ದೇನೂ ದೊಡ್ಡ ಕೆಲಸ ಮಾಡಲಿಲ್ಲ! ಮರದಲ್ಲಿ ಆ ಹಕ್ಕಿ ಕುಳಿತಿದ್ದ ರೆಂಬೆಯನ್ನು ಕತ್ತರಿಸಿಬಿಟ್ಟೆ, ಅಷ್ಟೆ!’ ಎಂದ. ಆ ರೈತನ ಹಾಗೇ ನಾವು ಕುಳಿತಿರುವ ರೆಂಬೆಯನ್ನು ಕೆಲವರು ಕಡಿದು ಬಿಡುತ್ತಾರೆ. ನಮ್ಮ ಶಕ್ತಿಯನ್ನು ನಾವು ಅರಿಯುವುದೇ ಆಗ. ಭಯವೆಂಬ ರೆಂಬೆಯಲ್ಲಿ ಕುಳಿತು ನಾವು ಪ್ರಯತ್ನವನ್ನೇ ಮರೆತುಬಿಡಬಾರದು.

⌘